ಒ.ಎಸ್.  - 109/2024
ಪಿ.ಡಬ್ಲ್ಯು. - 01

**ದಿನಾಂಕ    17-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 2 ನೇ ಪ್ರತಿವಾದಿಯರ ಪರ ಡಿಎಸ್ ವಕೀಲರಿಂದಃ**

ಈ ನ್ಯಾಯಾಲಯದಲ್ಲಿ ಹಾಜರುಪಡಿಸಿದ ನನ್ನ ತಾಯಿ ಸಹಿ ಮಾಡಿದ ದಾಖಲೆ ಬಿಟ್ಟು ಬೇರೆ ದಾಖಲೆಗಳನ್ನು ನಾನು ನೋಡಿಲ್ಲ. ನನ್ನ ತಾಯಿ ಅವಿದ್ಯಾವಂತರು. ನನ್ನ ತಾಯಿ ವಿದ್ಯಾವಂತರು ಎಂದರೆ ಸರಿಯಲ್ಲ. ನನ್ನ ತಾಯಿಯ ಸಹಿ ಇರುವ ಬೇರೆ ದಸ್ತಾವೇಜು ಇರುವುದಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆ ಬಿಟ್ಟು ನನ್ನ ಸಹಿ ಇರುವ ಬೇರೆ ದಾಖಲೆಗಳು ಇರುವುದಿಲ್ಲ.  ನನ್ನ ಹೆಸರಿನಲ್ಲಿ ಬ್ಯಾಂಕ್ , ಸೊಸೈಟಿ ಅಥವಾ ಪೋಸ್ಟ್ ಆಫೀಸ್ ನಲ್ಲಿ ಖಾತೆ ಇರುವುದಿಲ್ಲ. ನಾನು ಈಗ ಮುಂಬಯಿನಲ್ಲಿ ವಾಸವಾಗಿರುತ್ತೇನೆ. ಉಡುಪಿಗೆ ಆಗಾಗ್ಗೆ ಬಂದು ಹೋಗುತ್ತೇನೆ. ನನ್ನ ಬಳಿ ಯಾವುದೇ ಎಟಿಎಂ ಕಾರ್ಡ್ ಗಳು ಇರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆ ಬಿಟ್ಟು ಬೇರೆ ಯಾವುದೇ ದಾಖಲೆಗಳಿಗೆ ಸಹಿ ಮಾಡಿಲ್ಲ.  ನಾನು ಎಸ್ಎಸ್ಎಲ್ ಸಿ ಯನ್ನು ಇನ್ನಂಜೆಯಲ್ಲಿ ಕಲಿತಿರುತ್ತೇನೆ.  ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಸಹಿ ಕಂಡುಬರುತ್ತದೆ ಎಂದರೆ ಸರಿ.  ನಿಪಿ-9 ರಲ್ಲಿ ಕಾಣಿಸಿದ ಜಿಪಿಎ ನ್ನು ನಾನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಯಾವುದೇ ಜಿಪಿಎನ್ನು ಬರೆದುಕೊಟ್ಟಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ದಿ 31-08-1999 ರ ದಿನಾಂಕವುಳ್ಳ ಜಿಪಿಎನ್ನು ತೋರಿಸಿ ಅದನ್ನು ನಾನು ಮತ್ತು ನನ್ನ ತಾಯಿ ಬರೆದಕೊಟ್ಟ ಜಿಪಿಎ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ತಿಳಿಸಿರುತ್ತಾರೆ. (ಸಾಕ್ಷಿಯು ಸದ್ರಿ ದಾಖಲೆಯನ್ನು ಅಲ್ಲಗಳೆದುವುದರಿಂದ ಅದನ್ನು ನಿಶಾನೆಯನ್ನಾಗಿ ಮಾಡಿರುವುದಿಲ್ಲ, ಆದರೇ ಸದ್ರಿ ದಾಖಲೆಯನ್ನು ಸಾಕ್ಷಿಗೆ ತೋರಿಸಿದ್ದರಿಂದ ಸದ್ರಿ ದಾಖಲೆಯನ್ನು ಕಡತದಲ್ಲಿ ಇಡಲಾಗಿದೆ). ನನ್ನ ಬಳಿ ನನ್ನ ಜನನ ಪ್ರಮಾಣ ಪತ್ರ ಇರುತ್ತದೆ ಎಂದರೆ ಸಾಕ್ಷಿ ನಾನು ಅರ್ಜಿ ಕೊಟ್ಟಿದ್ದೇನೆ ಆದರೇ ಇನ್ನೂ ಬಂದಿಲ್ಲ ಎಂದು ತಿಳಿಸಿರುತ್ತಾರೆ.  ನಿಪಿ 18 ಬಿಟ್ಟರೇ ನಿಮ್ಮ ಜನ್ಮ ದಿನಾಂಕ ಕಾಣುವ ಇತರೇ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಜಾತಕ ಇದೆ ಎಂದು ತಿಳಿಸಿರುತ್ತಾರೆ . ಜಾತಕ ಬಿಟ್ಟರೇ ಜನನ ಪ್ರಮಾಣ ಪತ್ರ ಇರುತ್ತದೆ ಆದರೇ ಅದು ಈಗ ನನ್ನ ಬಳಿ ಇಲ್ಲ ಎಂದು ತಿಳಿಸಿರುತ್ತಾರೆ .

ನಾನು ದಾವಾ ಸ್ವತ್ತುವಿಗೆ ಆಗಾಗ್ಗೆ ಹೋಗಿ ಬರುತ್ತೇನೆ.  ನಿಪಿ 9 ಆಗುವ ಮೊದಲು ಅದರಲ್ಲಿ ಕಾಣಿಸಿದ ಆಸ್ತಿ ಗದ್ದೆಯಾಗಿತ್ತು ಎಂದರೆ ಸರಿ . ತದನಂತರ 28 ನೇ ಪ್ರತಿವಾದಿ ಅದನ್ನು ತೆಂಗಿನ ತೋಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 7

ಮಕ್ಕಳು ಒಟ್ಟಾಗಿ ತೆಂಗಿನ ತೋಟ ಮಾಡಿರುತ್ತಾರೆ ರತ್ನಾಕರ್ ಸುವರ್ಣ ಮಾಡಿಲ್ಲ ಎಂದು ತಿಳಿಸಿರುತ್ತಾರೆ . ನಿಪಿ 10 ಕ್ರಯಚೀಟಿ ಆದ ನಂತರ 2 ನೇ ಪ್ರತಿವಾದಿ ನಿಪಿ 10 ರಲ್ಲಿ ಕಾಣಿಸಿದ ಆಸ್ತಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ . 2 ನೇ ಪ್ರತಿವಾದಿ ನಿಪಿ 10 ರಲ್ಲಿ ಕಾಣುವ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿ ಸುಮಾರು 18-19 ವರ್ಷಗಳು ಆಗಿರುತ್ತದೆ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಭೂ ಕಂದಾಯವನ್ನು 28 ನೇ ಪ್ರತಿವಾದಿ ಕಟ್ಟುತಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ಇರುವ ಮನೆ ತೆರಿಗೆಯನ್ನು 2 ನೇ ಪ್ರತಿವಾದಿ ಕಟ್ಟುತಿದ್ದಾರೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಭೂ ಕಂದಾಯ ಮತ್ತು ಅದರಲ್ಲಿ ಇರುವ ಮನೆ ತೆರಿಗೆಯನ್ನು ನನ್ನ ದೊಡ್ಡಪ್ಪ ಶಿವ ಪೂಜಾರಿ ಕಟ್ಟುತಿದ್ದರು . ನನ್ನ ದೊಡ್ಡಪ್ಪ ಶಿವ ಪೂಜಾರಿ ಕೊನೆಯ ಬಾರಿಗೆ ಕಂದಾಯವನ್ನು ಕಟ್ಟಿದರು ಎಂದು ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ಶಿವ ಪೂಜಾರಿ ತೀರಿಕೊಂಡು 20 ವರ್ಷಗಳಾಗಿರುತ್ತದೆ. ನನ್ನ ದೊಡ್ಡಪ್ಪ ಶಿವ ಪೂಜಾರಿ ತೀರಿಕೊಂಡ ನಂತರ ಅಲ್ಲಿ ನನ್ನ ದೊಡ್ಡಪ್ಪ ಶಿವಪೂಜಾರಿಯ ಅಕ್ಕ ಸಿಂದೂ ಪೂಜಾರಿ ಇದ್ದರು . ನನ್ನ ದೊಡ್ಡಪ್ಪ ಶಿವಪೂಜಾರಿಯ ಅಕ್ಕ ಸಿಂದೂ ಪೂಜಾರಿಯೇ ಕಂದಾಯವನ್ನು ದೊಡ್ಡಪ್ಪ ತೀರಿಕೊಂಡ ನಂತರ ಕಟ್ಟುತಿದ್ದರು . ನನ್ನ ಅತ್ತೆ ಸಿಂದೂ ಪೂಜಾರಿ ಈ ವಿಚಾರವನ್ನು ಹೇಳುತಿದ್ದರಿಂದ ಅವರೇ ಕಂದಾಯ ಕಟ್ಟುತಿದ್ದರು ಎಂದು ನಾನು ಈಗ ಹೇಳುತಿದ್ದೇನೆ . 2 ನೇ ಪ್ರತಿವಾದಿ ಈಗ ಅನಾರೋಗ್ಯದಿಂದ ಬಳಲುತಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯನ್ನು ಮೇ ತಿಂಗಳಿನಲ್ಲಿ ನೋಡಿರುತ್ತೇನೆ . ಅವರು ಈಗಲೂ ಅನಾರೋಗ್ಯದಿಂದ ಬಳಲುತಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸಿ ಶೆಡ್ಯೂಲ್ ಆಸ್ತಿ 2 ನೇ ಪ್ರತಿವಾದಿಗೆ ಸೇರಿ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಡಿ ಶೆಡ್ಯೂಲ್ ಆಸ್ತಿಯು 28 ನೇ ಪ್ರತಿವಾದಿಗೆ ಸೇರಿ 28 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸಿ ಶೆಡ್ಯೂಲ್ ಆಸ್ತಿಯಲ್ಲಿ 2 ನೇ ಪ್ರತಿವಾದಿಗೆ ಹಕ್ಕು ಇಲ್ಲಎಂದು ಯಾವ ಕಾರಣದಿಂದ ಹೇಳುತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ನನ್ನ ಅಜ್ಜಿ ಕೂಸು ಪೂಜಾರ್ತಿ ಗೆ ಸೇರಿದ ಆಸ್ತಿ ಅದರಲ್ಲಿ ಅವರ 7 ಜನ ಮಕ್ಕಳಿಗೂ ಹಕ್ಕು ಇದೆ ಎಂದು ತಿಳಿಸಿರುತ್ತಾರೆ . ದಾವಾ ಸ್ವತ್ತುವಿನಲ್ಲಿ ನನಗಾಗಲೀ, ಉಳಿದ ವಾದಿಯವರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**ಈ ಹಂತದಲ್ಲಿ ಉಳಿದ ಪ್ರತಿವಾದಿಗಳು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

ಒ.ಎಸ್.  - 109/2024

ಪಿ.ಡಬ್ಲ್ಯು. - 01

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.